## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ನಬಾರ್ಡ್ ಆರ್‌ಐಡಿಎಫ್- 19, 20 ಮತ್ತು 21 ರಡಿ ನಬಾರ್ಡ್ ವಿಶೇಷ ಅಭಿವೃದ್ಧಿ ಯೋಜನೆಯ ಪ್ರಗತಿ ಹೊಂದಿದ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗಾಗಿ ಪ್ರಸಕ್ತ 2016-17ನೇ ಸಾಲಿನಲ್ಲಿ ದ್ವಿತೀಯ ಮತ್ತು ತೃತೀಯ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:149/1:ಆರ್‌ಆರ್‌ಸಿ: 2012, ದಿನಾಂಕ:09.10.2013.
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:40:ಆರ್‌ಆರ್‌ಸಿ: 2014, ದಿನಾಂಕ: 28.04.2014.
3. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ:ಗ್ರಾಅಪ:149/5: ಆರ್‌ಆರ್‌ಸಿ:2012, ದಿ:25.11.2014.
4. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:85:ಆರ್‌ಆರ್‌ಸಿ:2014, ದಿ:14.10.2014.
5. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:31:ಆರ್‌ಆರ್‌ಸಿ:2015, ದಿ:06.03.2015.
6. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:31/1:ಆರ್‌ಆರ್‌ಸಿ: 2015, ದಿ:08.04.2015.
7. ಸರ್ಕಾರದಆದೇಶಸಂಖ್ಯೆ:ಗ್ರಾಅಪ:222:ಎಫ್‌ಎನ್:2016, ದಿನಾಂಕ:01.04.2016.
8. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:45:ಆರ್‌ಆರ್‌ಸಿ: 2016, ದಿ:24.05.2016.
9. ಸರ್ಕಾರದ ಉಪಕಾರ್ಯದರ್ಶಿ, ವಿಶೇಷ ಕೋಶ, ಯೋಜನಾ ಇಲಾಖೆ ರವರ ಕಂಡಿಕೆ ಸಂಖ್ಯೆ:ಪಿಡಿ:01: ಎಸ್‌ಡಿಪಿ:2016(ಗ್ರಾಅಪಂ.ರಾ), ದಿ:22.06.2016.
10. ಆಂತರಿಕ ಆರ್ಥಿಕ ಸಲಹೆಗಾರರ ಕಂಡಿಕೆ ಟಿಪ್ಪಣಿ ಸಂಖ್ಯೆ:ಗ್ರಾಅಪ:594:ಪಿಬಿಎಸ್:2016, ದಿ:10.11.2016.

**ಪ್ರಸ್ತಾವನೆ:**

ನಬಾರ್ಡ್ ಸಂಸ್ಥೆಯ ನೆರವಿನಡಿ ಆರ್‌ಐಡಿಎಫ್-19 ರಡಿ ಮೇಲೆ ಓದಲಾದ (1), (2) ಮತ್ತು (3)ರ ಸರ್ಕಾರಿ ಆದೇಶದಲ್ಲಿ 391 ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ ರೂ.14095.43 ಲಕ್ಷಗಳಿಗೆ ಹಾಗೂ ಆರ್‌ಐಡಿಎಫ್- 20 ರಡಿ ಮೇಲೆ ಓದಲಾದ (4), (5), ಮತ್ತು (6) ರ ಸರ್ಕಾರಿ ಆದೇಶಗಳಲ್ಲಿ 449 ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ ರೂ.21380.00 ಲಕ್ಷಗಳಿಗೆ ಹಾಗೂ ಆರ್.ಐ.ಡಿ.ಎಫ್-21ರಡಿ ಮೇಲೆ ಓದಲಾದ (8)ರ ಸರ್ಕಾರದ ಆದೇಶದಲ್ಲಿ 108 ರಸ್ತೆ ಕಾಮಗಾರಿಗಳಿಗೆ ರೂ.6274.50ಲಕ್ಷಗಳಿಗೆ ಅನುಮೋದನೆ ನೀಡಲಾಗಿದೆ.

ನಬಾರ್ಡ್ ವಿಶೇಷ ಅಭಿವೃದ್ಧಿ ಯೋಜನೆಯಡಿ ಜಿಲ್ಲಾ ಪಂಚಾಯತಿಗಳು ಅನುಷ್ಠಾನಗೊಳಿಸುತ್ತಿರುವ ಕಾಮಗಾರಿಗಳಿಗಾಗಿ ಪ್ರಸ್ತುತ 2016-17ನೇ ಸಾಲಿನಲ್ಲಿ ಪ್ರಗತಿ ಹೊಂದಿದ ಕಾಮಗಾರಿಗಳ ಬಾಕಿ ಬಿಲ್ಲುಗಳ ತೀರುವಳಿಗೆ ಹಣ ಬಿಡುಗಡೆ ಮಾಡುವಂತೆ ಜಿಲ್ಲಾ ಪಂಚಾಯತಿಗಳು, ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ರವರ ಮುಖಾಂತರ ಬೇಡಿಕೆ ಸಲ್ಲಿಸಿದ ಮೇರೆಗೆ ಪ್ರಸ್ತುತ 2016-17ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ರೂ.10000.00ಲಕ್ಷಗಳಲ್ಲಿ ದ್ವಿತೀಯ ಮತ್ತು ತೃತೀಯ ತ್ರೈಮಾಸಿಕ ಕಂತಿನ ಅನುದಾನ ತಲಾ ರೂ.2500.00ಲಕ್ಷಗಳಂತೆ ಒಟ್ಟು ರೂ.5000.00 ಲಕ್ಷಗಳನ್ನು ಅನುಬಂಧ-1ರಂತೆ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆಗೊಳಿಸಲು ಸರ್ಕಾರವು ತೀರ್ಮಾನಿಸಿದೆ.

ಆದ್ದರಿಂದ ಈ ಆದೇಶ

ನಬಾರ್ಡ್ ಆರ್‌ಐಡಿಎಫ್-19, 20 ಮತ್ತು 21ರಡಿಯಲ್ಲಿ ಜಿಲ್ಲಾ ಪಂಚಾಯತಿಗಳು ನಬಾರ್ಡ್ ವಿಶೇಷ ಅಭಿವೃದ್ಧಿ ಯೋಜನೆಯಡಿ ಕೈಗೆತ್ತಿಕೊಂಡು, ಪ್ರಗತಿಹೊಂದಿರುವ ಗ್ರಾಮೀಣ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗಾಗಿ ರೂ.5000.00ಲಕ್ಷಗಳನ್ನು (ರೂಪಾಯಿಗಳು ಐದು ಸಾವಿರ ಐನ್ನೂರು ಲಕ್ಷಗಳು ಮಾತ್ರ) ಲೆಕ್ಕ ಶೀರ್ಷಿಕೆ-5054-03-337-0-74-134 ರಡಿ ಅನುಬಂಧ-1ರಲ್ಲಿ ತೋರಿಸಿರುವಂತೆ ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ. ಬಿಡುಗಡೆ ಮಾಡಿರುವ ಅನುದಾನವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ವಿನಿಯೋಗಿಸಲು ಆದೇಶಿಸಿದೆ.

**ಷರತ್ತುಗಳು**

1. ಎಸ್‌ಡಿಪಿ ಕಾರ್ಯಕ್ರಮದ ಕ್ರಿಯಾ ಯೋಜನೆ ಮಾಹಿತಿಯನ್ನು ಪರಿಣಾಮಕಾರಿ ಅನುಷ್ಠಾನಕ್ಕಾಗಿ ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಮತ್ತು ಜಿಲ್ಲೆಯ ಅನುಷ್ಠಾನ ಅಧಿಕಾರಿಗಳಿಗೆ ಕಳುಹಿಸುವುದು.
2. ತಾಲ್ಲೂಕುವಾರು ಕ್ರಿಯಾ ಯೋಜನೆ ಮಾಹಿತಿಯನ್ನು ಎಸ್‌ಡಿಪಿ ಅಂತರ್ಜಾಲದಲ್ಲಿ (sdp.kar.nic.in)ಅಳವಡಿಸಿರುವ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಖಾತ್ರಿ ಪಡಿಸಿಕೊಳ್ಳುವುದು.
3. ಸಮಗ್ರವಾದ ಎಂಪಿಕ್‌ನ್ನು ತಯಾರಿಸಿ ರಾಜ್ಯ ಮಟ್ಟದಲ್ಲಿ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರಿಗೆ ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳಿಗೆ/ ಜಿ.ಪಂ.ಗಳಿಗೆ ಕಳುಹಿಸಿರುವ ಮತ್ತು ಉಸ್ತುವಾರಿ ಮಾಡಿರುವ ಬಗ್ಗೆ ಕಾರ್ಯದರ್ಶಿ ಮಟ್ಟದ ಎಂಎಂಆರ್ ಸಭೆಗಳಲ್ಲಿ ಖಾತ್ರಿ ಮಾಡಿಕೊಳ್ಳುವುದು.
4. ಅಂತರ್ಜಾಲದಲ್ಲಿನ ತಾಲ್ಲೂಕುವಾರು ಮಾಹಿತಿಯನ್ನು ನಿಯಮಿತವಾಗಿ ಇಂದೀಕರಿಸುವ ಬಗ್ಗೆ ಖಾತ್ರಿ ಮಾಡಿಕೊಳ್ಳುವುದು.
5. ಪ್ರತಿ ತಿಂಗಳು 15 ರಂದು ಹಿಂದಿನ ತಿಂಗಳಲ್ಲಿ ಸಾಧಿಸಿದ ಎಸ್‌ಡಿಪಿ ಪ್ರಗತಿಯ ವಿವರಗಳನ್ನು (hard copy)ಉಪ ಕಾರ್ಯದರ್ಶಿ, ವಿಶೇಷ ಕೋಶ , ಯೋಜನಾ ಇಲಾಖೆ, ಕೊಠಡಿ ಸಂಖ್ಯೆ:116, 1ನೇ ಗೇಟ್, ಬಹುಮಹಡಿ ಕಟ್ಟಡ, ಬೆಂಗಳೂರು-560001 ಇವರಿಗೆ ಕಳುಹಿಸುವುದು.
6. ನಬಾರ್ಡ್ ವಿಶೇಷ ಅಭಿವೃದ್ಧಿ ಯೋಜನೆಯಡಿ ಒದಗಿಸಿರುವ ಅನುದಾನವನ್ನು ಎಸ್‌ಡಿಪಿ ಅಲ್ಲದ ತಾಲ್ಲೂಕುಗಳಲ್ಲಿ ಬಳಸಿಕೊಳ್ಳಲು ಅವಕಾಶವಿರುವುದಿಲ್ಲ. ಈ ಅನುದಾನವನ್ನು ಅನುಮೋದನೆಯಾದ ನಬಾರ್ಡ್(ಎಸ್.ಡಿ.ಪಿ.) ಮಾಲಿಕೆಯ ಕಾಮಗಾರಿಯ ಹೊರತು ಬೇರೆ ಯಾವುದೇ ಕಾಮಗಾರಿಗಳಿಗೆ ಉಪಯೋಗಿಸಬಾರದು.
7. **ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆರವರು ನಬಾರ್ಡ್ ಯೋಜನೆಯ ಎಲ್ಲಾ ಅನುಮೋದಿತ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅನುಷ್ಠಾನದ ಜವಾಬ್ದಾರಿಯನ್ನು ನಿರ್ವಹಿಸುವುದು ಹಾಗೂ ಅನುಷ್ಠಾನಗೊಂಡ ಕಾಮಗಾರಿಗಳ ಮರುಪಾವತಿ ಬಿಲ್ಲುಗಳನ್ನು ಕಾರ್ಯಪಾಲಕ ಅಭಿಯಂತರರಿಂದ ಪಡೆದು ಸರ್ಕಾರಕ್ಕೆ ಸಲ್ಲಿಸುವುದು ಮತ್ತು ಸರ್ಕಾರಕ್ಕೆ ಕಾಲಕಾಲಕ್ಕೆ ಪ್ರಗತಿಯ ವರದಿಯನ್ನು ನೀಡತಕ್ಕದ್ದು.**
8. ಈ ಕಾರ್ಯಕ್ರಮದಡಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ ಬಿಡುಗಡೆ ಮಾಡಿದ ಅನುದಾನದಲ್ಲಿ ಭರಿಸಿದ ವೆಚ್ಚಕ್ಕೆ ಅನುಗುಣವಾಗಿ ನಬಾರ್ಡ್ ಮರುಪಾವತಿ ಕ್ಲೈಮ್ ಬಿಲ್ಲುಗಳನ್ನು ಒಂದು ತಿಂಗಳೊಳಗೆ ಸಲ್ಲಿಸತಕ್ಕದ್ದು.
9. ಬಳಕೆಯಾದ ಹಣ ಹಾಗೂ ಕಾಮಗಾರಿ ಪ್ರಗತಿಯನ್ನು ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಇವರಿಗೆ ಒದಗಿಸತಕ್ಕದ್ದು.

10. ಕಾಮಗಾರಿಗಳ ವಿವರವನ್ನು ನಬಾರ್ಡ್‌ನ ನಿಯಮಗಳಂತೆ ಗ್ರಾಮ ಪಂಚಾಯತಿಯ ಸೂಚನಾ ಫಲಕಗಳಲ್ಲಿ ಹಾಗೂ ಕಾಮಗಾರಿಗಳನ್ನು ನಡೆಸುತ್ತಿರುವ ಸ್ಥಳಗಳಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು, ಗ್ರಾಮ ಪಂಚಾಯತಿಯ ಸೂಚನಾ ಫಲಕಗಳಲ್ಲಿ ವಿವರಗಳನ್ನು ಬರೆಸುವ ಜವಾಬ್ದಾರಿ ಆಯಾ ಜಿಲ್ಲಾ ಪಂಚಾಯತಿಯ ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳದ್ದಾಗಿರುತ್ತದೆ.

11. ಬಳಕೆಯಾದ ಹಣ ಕುರಿತಂತೆ ಈ ಯೋಜನೆಯಡಿಯ ಎಲ್ಲಾ ಕಾಮಗಾರಿಗಳ Project Completion Report ನ್ನು ಸರ್ಕಾರಕ್ಕೆ ಹಾಗೂ ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ಒದಗಿಸತಕ್ಕದ್ದು.

12. ಈ ಯೋಜನೆಯ ಎಲ್ಲಾ ಕಾಮಗಾರಿಗಳ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಿದ ಬಳಿಕ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿ ಮಾಡುವುದು ಕಡ್ಡಾಯವಾಗಿರುತ್ತದೆ.

13. 2014-15ನೇ ಸಾಲಿನಿಂದ ಇಲಾಖೆಯಿಂದ ಅನುಷ್ಠಾನಗೊಳ್ಳುತ್ತಿರುವ ಅನುಮೋದನೆಗೊಂಡ ಕ್ರಿಯಾ ಯೋಜನೆಯಲ್ಲಿರುವ ಎಲ್ಲಾ ಯೋಜನೆಗಳ ಎಲ್ಲಾ ಕಾಮಗಾರಿಗಳ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಿ ಹಣ ಪಾವತಿಸಲು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಿಂದ ಪಡೆಯಲಾದ ಪಾವತಿ ಆದೇಶವಿದ್ದಲ್ಲಿ ಮಾತ್ರ ಕಾಮಗಾರಿಗಳ ಬಿಲ್ಲುಗಳ ಪಾವತಿಯನ್ನು ಕಡ್ಡಾಯವಾಗಿ ಮಾಡುವಂತೆ ಹಾಗೂ ಸರ್ಕಾರದ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ. ಅದರಂತೆ ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನಕ್ಕೆ ಸಂಬಂಧಿಸಿದಂತೆ ಕೈಗೊಂಡು ಪೂರ್ಣಗೊಳಿಸಿರುವ ಕಾಮಗಾರಿಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಿರುವ ನಿಬಂಧನೆಗೆ ಒಳಪಡಿಸಿದೆ.

14. ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡಿದ ಹಣವನ್ನು ಜಿಲ್ಲಾ ಖಜಾನೆಯು ಪ್ರಸ್ತುತ ವರ್ಷಕ್ಕೆ ನಿಗಧಿಗೊಳಿಸುವ ದಿನಾಂಕದೊಳಗೆ ಡ್ರಾ ಮಾಡಿ ವಿನಿಯೋಗಿಸತಕ್ಕದ್ದು.

15. ಜಿಲ್ಲಾ ಪಂಚಾಯತಿಗಳು ಮುಂದಿನ ತ್ರೈಮಾಸಿನ ಕಂತಿನ ಅನುದಾನ ಬಿಡುಗಡೆ ಬೇಡಿಕೆ ಸಲ್ಲಿಸುವ ಮುನ್ನ ಈ ಆದೇಶದಲ್ಲಿ ಬಿಡುಗಡೆ ಮಾಡಿದ ಶೇಕಡ 75ರಷ್ಟು ವೆಚ್ಚ ಕಡ್ಡಾಯವಾಗಿ ಭರಿಸತಕ್ಕದ್ದು. ಇಲ್ಲದಿದ್ದಲ್ಲಿ ಮುಂದಿನ ಕಂತಿನ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಕಂಡಿಕೆ ಟಿಪ್ಪಣಿ ಸಂಖ್ಯೆ:ಗ್ರಾಅಪ:594:ಪಿಬಿಎಸ್:2016, ದಿ:10.11.2016ರಲ್ಲಿ ನೀಡಿದ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಾ. ಬೂವನಹಳ್ಳಿ ನಾಗರಾಜ್)
ನಿರ್ದೇಶಕರು
ಸುವರ್ಣ ಗ್ರಾಮೋದಯ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಪ್ರತಿಯನ್ನು:**

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಆಡಿಟ್-1) ಕರ್ನಾಟಕ, ಬೆಂಗಳೂರು
3. ಮಹಾಲೇಖಪಾಲರು (ಆಡಿಟ್-2) ಕರ್ನಾಟಕ, ಬೆಂಗಳೂರು
4. ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ರವರ ಆಪ್ತ ಕಾರ್ಯದರ್ಶಿಗಳು.
5. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.

6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಪಿಎಂಯು) (ಐಎಫ್) 5ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬಹುಮಹಡಿ, ಕಟ್ಟಡ, ಬೆಂಗಳೂರು.
9. ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ. ಬಹುಮಹಡಿ ಕಟ್ಟಡ, ಬೆಂಗಳೂರು.
10. ವಿಶೇಷಾಧಿಕಾರಿಗಳು, (ಜಿ.ಪಂ) ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
11. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
12. ಕರ್ನಾಟಕ ವಿಧಾನ ಸಭೆಯ ಮಾನ್ಯ ವಿರೋದ ಪಕ್ಷದ ನಾಯಕರ ಆಪ್ತಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
13. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
14. ಉಪ ನಿರ್ದೇಶಕರು, ನೆಟ್ ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಖಜಾನಾ ಇಲಾಖೆ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
15. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
16. ಅಧೀನ ಕಾರ್ಯದರ್ಶಿ, ವೆಚ್ಚ-6, ಜಿ.ಪಂ, ಆರ್ಥಿಕ ಇಲಾಖೆ, ಬೆಂಗಳೂರು.
17. ಮುಖ್ಯ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, 2ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು.-9.
18. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
19. ಎಲ್ಲಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತಗಳ ಅಧೀಕ್ಷಕ ಅಭಿಯಂತರರು.
20. ಎಲ್ಲಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಅಭಿಯಂತರರು.
21. ವೆಬ್‌ಸೈಟ್/ಮಾಹಿತಿಕೇಂದ್ರ-(10 ಪ್ರತಿಗಳು), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ. ಬಹುಮಹಡಿ ಕಟ್ಟಡ, ಬೆಂಗಳೂರು.
22. ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಅನುಬಂಧ

**ನಬಾರ್ಡ್ ವಿಶೇಷ ಅಭಿವೃದ್ಧಿ ಯೋಜನೆಯಡಿ ಪ್ರಗತಿ ಹೊಂದಿದ ರಸ್ತೆ ಮತ್ತು ಸೇತುವೆ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸಲು ಜಿ.ಪಂ.ಗಳಿಗೆ 2016-17ನೇ ಸಾಲಿನ ಲೆಕ್ಕಶೀರ್ಷಿಕೆ-5054-03-337-0-74-134ರಡಿ ದ್ವಿತೀಯ ಮತ್ತು ತೃತೀಯ ತ್ರೈಮಾಸಿಕ ಅವಧಿಗೆ ಬಿಡುಗಡೆ ಮಾಡಿದ ಅನುದಾನದ ವಿವರ.**

**ಸರ್ಕಾರದ ಆದೇಶ ಸಂ:ಗ್ರಾಅಪ:49:ಆರ್‌ಆರ್‌ಸಿ:2016, ಬೆಂಗಳೂರು ದಿ:07.12.2016ರ ಲಗತ್ತು**

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಜಿಲ್ಲೆ | ನಬಾರ್ಡ್ ವಿಶೇಷ ಅಭಿವೃದ್ಧಿ ಯೋಜನೆಯಡಿ ರಸ್ತೆ ಮತ್ತು | | 2016-17ನೇ ಸಾಲಿಗೆ ಅನುಮೋದನೆಯಾದ ಮೊತ್ತ | ಈವರೆಗೆ ಬಿಡುಗಡೆ ಮಾಡಿದ ಮೊತ್ತ | ಈ ಆದೇಶದಲ್ಲಿ ಬಿಡುಗಡೆ ಮಾಡಿದ ಮೊತ್ತ |
|---|---|---|---|---|---|---|
| | | ಒಟ್ಟು ಸಂಖ್ಯೆ | ಒಟ್ಟು ಅಂದಾಜು ಮೊತ್ತ | | | |
| 1 | 2 | 3 | 4 | 5 | 5 | |
| 1 | ಬಳ್ಳಾರಿ(ಹಡಗಲಿ) | 20 | 1004.45 | 604.96 | 40.60 | 300.00 |
| 2 | ಬೀದರ್ | 9 | 820.00 | 621.02 | 0.00 | 450.00 |
| 3 | ಕಲಬುರಗಿ | 33 | 2201.00 | 1335.08 | 300.00 | 630.00 |
| 4 | ಕೊಪ್ಪಳ | 26 | 951.00 | 654.57 | 100.00 | 250.00 |
| 5 | ರಾಯಚೂರು | 10 | 511.50 | 416.24 | 100.00 | 150.00 |
| 6 | ಯಾದಗಿರಿ | 15 | 515.00 | 368.11 | 150.00 | 0.00 |
| 7 | ಬಾಗಲಕೋಟೆ | 19 | 670.00 | 179.60 | 0.00 | 160.00 |
| 8 | ಬೆಳಗಾವಿ | 35 | 2033.96 | 574.41 | 250.00 | 320.00 |
| 9 | ವಿಜಯಪುರ | 15 | 1355.00 | 531.76 | 300.00 | 250.00 |
| 10 | ಧಾರವಾಡ | 7 | 593.00 | 93.94 | 0.00 | 70.00 |
| 11 | ಗದಗ | 11 | 815.48 | 186.31 | 77.24 | 80.00 |
| 12 | ಹಾವೇರಿ | 26 | 925.00 | 386.44 | 0.00 | 250.00 |
| 13 | ಉತ್ತರಕನ್ನಡ | 5 | 165.50 | 47.56 | 25.00 | 20.00 |
| 14 | ಬೆಂಗಳೂರು (ಗ್ರಾ) | 2 | 80.00 | 28.40 | 0.00 | 20.00 |
| 15 | ಬೆಂಗಳೂರು ನಗರ | 3 | 180.00 | 125.91 | 50.00 | 70.00 |
| 16 | ಚಿಕ್ಕಬಳ್ಳಾಪುರ | 5 | 350.00 | 120.37 | 0.00 | 80.00 |
| 17 | ಚಿತ್ರದುರ್ಗ | 10 | 720.00 | 394.24 | 150.00 | 250.00 |
| 18 | ದಾವಣಗೆರೆ | 21 | 912.00 | 465.97 | 150.00 | 260.00 |
| 19 | ಕೋಲಾರ | 12 | 505.00 | 203.45 | 50.00 | 120.00 |
| 20 | ರಾಮನಗರ | 7 | 305.00 | 136.93 | 0.00 | 80.00 |
| 21 | ಶಿವಮೊಗ್ಗ | 17 | 405.00 | 145.20 | 100.00 | 70.00 |
| 22 | ತುಮಕೂರು | 35 | 1590.00 | 879.53 | 266.94 | 450.00 |
| 23 | ಚಾಮರಾಜನಗರ | 9 | 620.00 | 265.46 | 0.00 | 200.00 |
| 24 | ಚಿಕ್ಕಮಗಳೂರು | 9 | 420.00 | 245.74 | 200.00 | 0.00 |
| 25 | ಹಾಸನ | 22 | 880.00 | 297.34 | 150.00 | 100.00 |
| 26 | ಮಂಡ್ಯ | 27 | 1296.00 | 530.58 | 0.00 | 300.00 |
| 27 | ಮೈಸೂರು | 13 | 720.00 | 160.88 | 40.22 | 70.00 |
| | ಒಟ್ಟು | 423 | 21543.89 | 10000.00 | 2500.00 | 5000.00 |

(ಡಾ. ಬೂವನಹಳ್ಳಿ ನಾಗರಾಜ್)
ನಿರ್ದೇಶಕರು
ಸುವರ್ಣ ಗ್ರಾಮೋದಯ ಯೋಜನೆ ಹಾಗೂ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.